ಕರ್ನಾಟಕ ವಿಧಾನ ಪರಿಷತ್ತು

ಮಾನ್ಯ ವಿಧಾನ ಪರಿಷತ್ತಿನ ಸದಸ್ಯರು : ಶ್ರೀಮತಿ ಎಸ್. ವೀಣಾ ಅಚ್ಚಯ್ಯ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 1310

ಉತ್ತರಿಸಬೇಕಾದ ದಿನಾಂಕ : 08-03-2022

ಉತ್ತರಿಸಬೇಕಾದ ಸಚಿವರು : ಸಹಕಾರ ಸಚಿವರು

ಕ್ರಸಂ	ಪ್ರಶ್ನೆ	ಉತ್ತರ
ಅ	ಕೊಡಗು ಜಿಲ್ಲೆಯಲ್ಲಿ ಪ್ರಸಕ್ತ ಆರ್ಥಿಕ ವರ್ಷದಲ್ಲಿ ಈಗಾಗಲೇ ಸಹಕಾರ ಸಂಸ್ಥೆಗಳಿಂದ ಸಾಲ ಮತ್ತು ಸೌಲಭ್ಯಗಳನ್ನು ಒದಗಿಸಲಾಗಿದೆಯೇ;	ಹೌದು, ಒದಗಿಸಲಾಗಿದೆ.
ಆ	ಇದುವರೆಗೂ, ಜಿಲ್ಲೆಯ ಪ್ರತಿ ಸಹಕಾರ ಸಂಸ್ಥೆಯ ಮೂಲಕ ವಿತರಣೆಯಾಗಿರುವ ಸಾಲ ಮತ್ತು ಸೌಲಭ್ಯಗಳ ವಿವರಗಳೇನು;	ಕೊಡಗು ಜಿಲ್ಲೆಯಲ್ಲಿನ 73 ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಗಳು, ಕೊಡಗು ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕ್ ಹಾಗೂ 03 ಪಿಕಾರ್ಡ್ ಬ್ಯಾಂಕುಗಳ ಮುಖಾಂತರ ರೈತರಿಗೆ ಈ ಕೆಳಕಂಡ ಸಾಲ ಸೌಲಭ್ಯಗಳನ್ನು ನೀಡಲಾಗುತ್ತಿದೆ. 1. ರೂ.3.00 ಲಕ್ಷಗಳವರೆಗೆ ಶೂನ್ಯ ಬಡ್ಡಿ ದರದಲ್ಲಿ ಅಲ್ಪಾವಧಿ ಬೆಳೆ ಸಾಲ ಹಾಗೂ ರೂ.2.00 ಲಕ್ಷಗಳವರೆಗೆ ಶೂನ್ಯ ಬಡ್ಡಿ ದರದಲ್ಲಿ ಪಶುಸಂಗೋಪನೆ ಮತ್ತು ಮೀನುಗಾರಿಕೆ ಚಟುವಟಿಕೆಗಳಿಗೆ ದುಡಿಯುವ ಬಂಡವಾಳವಾಗಿ ಪಶುಸಂಗೋಪನೆ ಮತ್ತು ಮೀನುಗಾರಿಕೆ ಸಾಲ ಒದಗಿಸಲಾಗುತ್ತಿದೆ. 2. ರೂ.10.00 ಲಕ್ಷಗಳವರೆಗೆ ಶೇ.3 ರ ಬಡ್ಡಿ ದರದಲ್ಲಿ ಮಧ್ಯಮಾವಧಿ ಮತ್ತು ದೀರ್ಘಾವಧಿ ಕೃಷಿ/ಕೃಷಿ ಸಂಬಂಧಿತ ಸಾಲ, ತುಂತುರು ನೀರಾವರಿ ಸಾಲ, ಕೃಷಿ ಯಂತ್ರೋಪಕರಣ ಖರೀದಿ ಸಾಲ, ಟ್ರಾಕ್ಟರ್/ಟಿಲ್ಲರ್ ಖರೀದಿ ಸಾಲ, ಗೋದಾಮು/ಕಣ ನಿರ್ಮಾಣ ಸಾಲ, ಕೆರೆ ನಿರ್ಮಾಣ ಸಾಲ, ಸೋಲಾರ್ ಉಪಕರಣಗಳ ಅಳವಡಿಕೆಗೆ, ಹೆಚ್‌ಡಿಪಿ ಪೈಪ್ ಲೈನ್ ಅಳವಡಿಕೆಗೆ, ಬೋರ್‌ವೆಲ್ ಕೊರೆಯಲು, ಹೈನುಗಾರಿಕೆ/ಮೀನುಗಾರಿಕೆ ಮತ್ತು ಹಂದಿ/ಕುರಿ/ಕೋಳಿ ಸಾಗಾಣಿಕೆಗೆ ಪ್ರಾಜೆಕ್ಟ್ ಆಧಾರಿತ ಸಾಲ ನೀಡಲಾಗುತ್ತಿದೆ.

...2

<table>
<tr>
<td>ಇ)</td>
<td>ಪ್ರಸಕ್ತ ಆರ್ಥಿಕ ವರ್ಷದಲ್ಲಿ ಇದುವರೆಗೂ ಎಷ್ಟು ರೈತರಿಗೆ ಸಾಲದ ಹಣವನ್ನು ವಿತರಣೆ ಮಾಡಲಾಗಿದೆ;</td>
<td>2021-22ನೇ ಆರ್ಥಿಕ ವರ್ಷದಲ್ಲಿ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಗಳು, ಕೊಡಗು ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕ್ ಹಾಗೂ ಪಿಕಾರ್ಡ್ ಬ್ಯಾಂಕುಗಳ ಮುಖಾಂತರ ದಿನಾಂಕ:28-02-2022 ರ ಅಂತ್ಯಕ್ಕೆ ಇದ್ದಂತೆ ಒಟ್ಟು 38,006 ರೈತರಿಗೆ ರೂ. 64,343.70 ಲಕ್ಷಗಳ ಸಾಲವನ್ನು ವಿತರಿಸಲಾಗಿರುತ್ತದೆ.

ಸಾಲ ವಿತರಿಸಿದ ವಿವರ ಈ ಕೆಳಕಂಡಂತಿದೆ.

(ರೂ. ಲಕ್ಷಗಳಲ್ಲಿ)
<table>
<tr><th>ಕ್ರ ಸಂ.</th><th>ಸಾಲದ ವಿವರ</th><th>ರೈತರ ಸಂಖ್ಯೆ</th><th>ವಿತರಿಸಿರುವ ಸಾಲದ ಮೊತ್ತ</th></tr>
<tr><td>1</td><td>ಅಲ್ಪಾವಧಿ ಬೆಳೆ ಸಾಲ</td><td>36,012</td><td>59,493.79</td></tr>
<tr><td>2</td><td>ಮಧ್ಯಮಾವಧಿ ಕೃಷಿ/ಕೃಷಿ ಸಂಬಂಧಿತ ಸಾಲ</td><td>908</td><td>3,425.78</td></tr>
<tr><td>3</td><td>ಹೈನುಗಾರಿಕೆ ಸಾಲ</td><td>168</td><td>25.92</td></tr>
<tr><td>4</td><td>ಮಿನುಗಾರಿಕೆ ಸಾಲ</td><td>6</td><td>9.00</td></tr>
<tr><td>5</td><td>ದೀರ್ಘಾವಧಿ ಕೃಷಿ/ಕೃಷಿ ಸಂಬಂಧಿತ ಸಾಲ</td><td>912</td><td>1389.21</td></tr>
<tr><td></td><td>ಒಟ್ಟು</td><td>38,006</td><td>64,343.70</td></tr>
</table>
</td>
</tr>
<tr>
<td>ಈ)</td>
<td>ಸಾಲ ಸೌಲಭ್ಯ ಕೋರಿರುವ ಎಲ್ಲಾ ಅರ್ಹ ರೈತರಿಗೆ ಬೆಳೆ ಸಾಲದ ಸೌಲಭ್ಯವನ್ನು ಕಲ್ಪಿಸಲಾಗಿದೆಯೇ? (ವಿವರ ನೀಡುವುದು)</td>
<td>ಸಾಲ ಸೌಲಭ್ಯ ಕೋರಿರುವ ಎಲ್ಲಾ ಅರ್ಹ ರೈತರಿಗೆ ಬೆಳೆ ಸಾಲದ ಸೌಲಭ್ಯವನ್ನು ಕಲ್ಪಿಸಲಾಗಿರುತ್ತದೆ.

ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಗಳು ಹಾಗೂ ಕೊಡಗು ಜಿಲ್ಲಾ ಸಹಕಾರ ಕೇಂದ್ರ ಬ್ಯಾಂಕ್ ಮುಖಾಂತರ ದಿನಾಂಕ:28-02-2022 ರ ಅಂತ್ಯಕ್ಕೆ ಇದ್ದಂತೆ 36,012 ರೈತರಿಗೆ ರೂ. 59,493.79 ಲಕ್ಷಗಳ ಅಲ್ಪಾವಧಿ ಬೆಳೆ ಸಾಲವನ್ನು ವಿತರಿಸಲಾಗಿರುತ್ತದೆ</td>
</tr>
</table>

ಸಂಖ್ಯೆ : ಸಿಒ 84 ಸಿಎಲ್‌ಎಸ್ 2022

(ಎಸ್. ಟಿ. ಸೋಮಶೇಖರ್)
ಸಹಕಾರ ಸಚಿವರು